# 5

# ಯೇಸು: ಅಭಿಷಿಕ್ತನು

A *mashiah,* ಅಭಿಷಿಕ್ತನು, ಅವನ ಮೇಲೆ ಎಣ್ಣೆಯು ಸುರಿಸಲ್ಪಟ್ಟ ವ್ಯಕ್ತಿಯಾಗಿದ್ದಾನೆ. ಕೀಷನ ಮಗ ಸೌಲನು ಈ ರೀತಿಯಲ್ಲಿ ಒಬ್ಬ *ಅಭಿಷಿಕ್ತನಾದನು* (1 ಸಮುವೇಲ 10:1). ಅದರಂತೆ ದಾವೀದನು *ಮೆಸ್ಸೀಯನಾದನು:* "ಸಮುವೇಲನು ಎಣ್ಣೆಯ ಕೊಂಬನ್ನು ತೆಗೆದುಕೊಂಡು ಅವನನ್ನು ಅಭಿಷೇಕಿಸಿದನು" (1 ಸಮುವೇಲ 16:13). ಒಬ್ಬನನ್ನು ಅರಸನನ್ನಾಗಿ ನೇಮಿಸುವುದು ಅವನನ್ನು ಎಣ್ಣೆಯಿಂದ ಅಭಿಷೇಕಿಸುವುದು ಕ್ರಮ ಪ್ರಕಾರವಾದ ಮಾರ್ಗವಾಗಿತ್ತು.

*ಮೆಸ್ಸೀಯ* ವಿಚಾರವನ್ನು ದೇವರು ತನ್ನ ಸ್ವಂತ ಕುಮಾರನಿಗೆ ಉಪಯೋಗಿಸಿ ಕೊಂಡನು. ಯೇಸುವನ್ನು ವಿವರಿಸಲಿಕ್ಕೆ ಆತನು ಉಪಯೋಗಿಸಿದ ಶಿರೋನಾಮಗಳಲ್ಲಿ ಒಂದು ಮೆಸ್ಸೀಯ, ಆತನು "ಅಭಿಷಿಕ್ತನು" ಎಂಬುದು (ಕೀರ್ತನೆ 2:2). ದಾನಿಯೇಲನು ಯೇಸುವನ್ನು "ಅಭಿಷಿಕ್ತನಾದ ಪ್ರಭುವು," ಅರಸೊತ್ತಿಗೆಯ ವ್ಯಕ್ತಿಯಂತೆ ಚಿತ್ರಿಸಿದ್ದಾನೆ. (ದಾನಿಯೇಲ 9:25).

*Mashiah* ಎಂಬ ಹಿಬ್ರೂ ಪದವು ಇಂಗ್ಲೀಷಿನಲ್ಲಿ "messiah" ಎಂಬಂತೆ ಬರುತ್ತದೆ; ಅದರ ಸಮಾನವಾದ ಗ್ರೀಕ ಪದ *Christos* ಎಂಬುದು "Christ" ಎಂದಾಗುತ್ತದೆ. ಬಾವಿಯ ಬಳಿಯಲ್ಲಿ ಯೇಸುವಿನೊಂದಿಗೆ ಮಾತಾಡಿದ ಸಮಾರ್ಯದ ಸ್ತ್ರೀಯು ದೇವತ್ವವು ಈ ಲೋಕದಲ್ಲಿ *ಮೆಸ್ಸೀಯನಂತೆ* ಪ್ರವೇಶ ಮಾಡುವನೆಂಬುದರ ಬಗ್ಗೆ ಹೇಗೋ ತಿಳಿದು ಕೊಂಡಿದ್ದಳು. "ಮೆಸ್ಸೀಯನು (ಅಂದರೆ ಕ್ರಿಸ್ತನು ಎಂದು ಕರೆಯಲ್ಪಡುವಾತನು) ಬರುತ್ತಾನೆಂದು ಬಲ್ಲೆನು" (ಯೋಹಾನ 4:25) ಎಂದು ಆಕೆ ಹೇಳಿದಳು.

ಈ ಲೋಕದೊಳಗೆ ಬರುವಾಗ ದೇವತ್ವವು ಧರಿಸುವ ಶಿರೋನಾಮವು ಅಭಿಷಿಕ್ತನು, *ಮೆಸ್ಸೀಯನು* ಎಂದಾಗಿರುವದೆಂಬುದನ್ನು ಯೋಹಾನನ ಶಿಷ್ಯರಲ್ಲಿ ಒಬ್ಬನಾದ ಅಂದ್ರೇಯನೂ ಸಹ ತಿಳಿದಿದ್ದನು. "ಮೆಸ್ಸೀಯನು ನಮಗೆ ಸಿಕ್ಕಿದನು" (ಯೋಹಾನ 1:41) ಎಂದು ಅವನು ಪೇತ್ರನಿಗೆ ಹೇಳಿದಾಗ ಅವನ ಧ್ವನಿಯಲ್ಲಿ ಆಳವಾದ ಭಾವನೆ ಇದ್ದಿರಬೇಕು.

ಅನಂತರದಲ್ಲಿ ಪೇತ್ರನು, "ನೀನು ಕ್ರಿಸ್ತನು, ಜೀವಿಸುವ ದೇವರ ಕುಮಾರನು" ಎಂದು ಅರಿಕೆ ಮಾಡಿದನು (ಮತ್ತಾಯ 16:16). ಅವನ ನಂಬಿಕೆಯ ಮೇಲೆ ಯೇಸುವು ಪೇತ್ರನನ್ನು ಅಭಿನಂದಿಸಿದನು ಮತ್ತು ದೇವರ ಜ್ಞಾನದಲ್ಲಿ ಯೋಜಿಸಲ್ಪಟ್ಟ ಸಭೆಯು ನಜರೇತಿನವನು ದೇವರ ಅಭಿಷಿಕ್ತ ಕುಮಾರನಾಗಿದ್ದಾನೆ ಎಂಬ ಘಟನೆಯ ಮೇಲೆ ಸ್ಥಾಪಿಸಲ್ಪಡುವುದು ಎಂದು ಘೋಷಿಸಿದನು. ಹಾಗಿದ್ದರೂ, ತಾಂತ್ರಿಕವಾಗಿ ಮಾತಾಡುವದಾದರೆ, ಪೇತ್ರನ ಅರಿಕೆಯ ಸಮಯದಲ್ಲಿ, ಯೇಸುವು *ಮೆಸ್ಸೀಯನು,* ಅಭಿಷಿಕ್ತನು ಆಗಿರಲಿಲ್ಲ. ಆತನು ಮರಣವನ್ನೂ ಸಮಾಧಿಯನ್ನೂ ಜಯಿಸಿದನಂತರ ಹಾಗೂ ಮಹಿಮೆಗೆ ಏರಿ ಹೋದನಂತರ ಮಾತ್ರವೇ ದೇವರ *ಮೆಸ್ಸೀಯನೆಂದು* ಆತನು ಅಭಿಷೇಕಿಸಲ್ಪಟ್ಟನು. ಪಂಚಾಶತ್ತಮದ ದಿನದಂದು, ಆತನ ದಿವಾರೋಹಣ ನಂತರ ಹತ್ತು ದಿನಗಳ ಮೇಲೆ ತನ್ನ ಪಟ್ಟಾಭಿಷೇಕಕ್ಕಾಗಿ ಯೇಸು ತನ್ನ ತಂದೆಯ ಮುಂದೆ

ಹೋದನು. ಅಲಂಕಾರಿಕವಾಗಿ ಮಾತನಾಡುವದಾದರೆ, ಆತನ ತಂದೆಯು ಆಭಿಷೇಕ ತೈಲವನ್ನು ಆತನ ತಲೆಯ ಮೇಲೆ ಹೊಯ್ದನು. ಆತನು ಹೀಗೆ ಹೇಳಿದಂತೆ ಯೇಸುವನ್ನು ಆತನು "ದೇವರು" ಎಂದು ಕರೆದನು:

> ದೇವರೇ, ನಿನ್ನ ಸಿಂಹಾಸನವು ಯುಗಯುಗಾಂತರಗಳಲ್ಲಿಯೂ ಇರುವದು;
> ನಿನ್ನ ರಾಜದಂಡವು ನ್ಯಾಯಸ್ಥಾಪಕವಾದದ್ದೇ.
> ನೀನು ನೀತಿಯನ್ನು ಪ್ರೀತಿಸಿದಿ ಅನೀತಿಯನ್ನು ದ್ವೇಷಿಸಿದಿ;
> ಆದದರಿಂದ ದೇವರು ನಿನ್ನ ದೇವರೇ, ನಿನ್ನನ್ನು ನಿನ್ನ ಜೊತೆಗಾರರಿಗಿಂತ ಉನ್ನತ ಸ್ಥಾನಕ್ಕೆ ಏರಿಸಿ ಪರಮಾನಂದ ತೈಲದಿಂದ ಅಭಿಷೇಕಿಸಿದ್ದಾನೆ
> (ಕೀರ್ತನೆ 45:6, 7).

ಕರ್ತನ ದಿನದಂದು ಆ ಐತಿಹಾಸಿಕ ಸಂದರ್ಭದಿಂದ (ಬಹುಶಃ ಮೇ 26, ಕ್ರಿ.ಶ. 30), ಆತನು ಅಧಿಕೃತವಾಗಿ ಭಾಗ್ಯವಂತನಾದ ಏಕಾಧಿಪತಿಯೂ ಅರಸರ ಅರಸನೂ ಕರ್ತನ ಕರ್ತನು ಆಗಿ ಮಾಡಲ್ಪಟ್ಟನು (1 ತಿಮೆಥೆ 6:15), ವಿಶೇಷವಾದ *ಮೆಸ್ಸೀಯನಾದನು.*

© 2009 Truth for Today